**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1123/2024**

| | | |
|---|---|---|
| ಸಾಕ್ಷಿದಾರರ ಹೆಸರು | : ವಸಂತ್ ಕುಮಾರ್ @ ಅಪ್ಪಣ್ಣಚಾರಿ | ಪ್ರಾಸಾ-2 |
| ತಂದೆಯ ಹೆಸರು | : ಸಿದ್ದಾಚಾರಿ | ಚಾಸಾ-2 |
| ವಯಸ್ಸು | : 71 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕಮ್ಮಾರ | ದಿನಾಂಕಃ 31.10.2025 |
| ವಾಸಸ್ಥಳ | : ಪಲ್ಗುಣಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಮಗ. ಚಾಸಾ-1 ನನ್ನ ಮಗಳು. ಚಾಸಾ-3 ನನ್ನ ಅಳಿಯ.

ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ನಾನು ಯಾವುದೇ ಪ್ರಕರಣದ ಪ್ರತ್ಯಕ್ಷ ದರ್ಶಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನಗೆ ಯಾರೂ ಹಲ್ಲೆ ಮಾಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಆರೋಪಿ ಮತ್ತು ಚಾಸಾ-1 ರವರ ನಡುವೆ ಆಸ್ತಿ ವಿಚಾರ ಕುರಿತು ಮನಸ್ತಾಪವಿರುತ್ತದೆ ಎಂದರೆ ಸರಿ. ಸದರಿ ವಿಷಯದ ಕುರಿತು ದಿ.26.11.2023 ರಂದು ಊರಿನಲ್ಲಿ ಹಿರಿಯರು ಸೇರಿ ರಾಜಿ ಪಂಚಾಯ್ತಿಯನ್ನು ಮಾಡಿರುತ್ತೇವೆ ಎಂದರೆ ಸರಿ. ಸದರಿ ಪಂಚಾಯ್ತಿಯನ್ನು ಮೊದಲ ಬಾರಿಗೆ ಆರೋಪಿಯು ಒಪ್ಪಿರುತ್ತೇನೆ ಎಂದು ತಿಳಿಸಿ ನಂತರದಲ್ಲಿ ನನಗೆ ಒಪ್ಪಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ದಿ.28.11.2023 ರಂದು ಚಾಸಾ-1 ರವರು ಬಜಾಜ್ ಫೈನಾನ್ಸ್ ನಿಂದ ಸಾಲ ಪಡೆಯುವ ಬಾಬ್ತು ಮನೆಯ ಫೋಟೋವನ್ನು ತೆಗೆಯಲು ಚಾಸಾ-4 ರವರೊಟ್ಟಿಗೆ ಮನೆಯ ಬಳಿ ಬಂದಾಗ ಆರೋಪಿಯು ತಡೆದಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಸಮಯದಲ್ಲಿ ಆರೋಪಿಯು ಚಾಸಾ-1 ರವರಿಗೆ ನೀನು ಮನೆಗೆ ಬರಬೇಡ ಎಂದು ಅವಾಚ್ಯ ಶಬ್ದದಿಂದ ನಿಂದಿಸಿ ಮತ್ತು ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿದ್ದೇನೆ ಎಂದು ನುಡಿದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿಯು ಮನೆಯಿಂದ ಕತ್ತಿಯನ್ನು ತಂದು ಚಾಸಾ-1 ರವರಿಗೆ ಹಲ್ಲೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಕೆಳಗೆ ಬಿದ್ದ ಸಮಯದಲ್ಲಿ ಆರೋಪಿಯು ಚಾಸಾ-1 ರವರ ತಲೆಗೆ ಹೊಡೆದು, ಕಾಲಿನಿಂದ ಒದ್ದಿರುತ್ತಾರೆ ಆ ಸಮಯದಲ್ಲಿ ನಾನು ಮತ್ತು ಚಾಸಾ-3 ರವರು ಆರೋಪಿಯನ್ನು ಹೊಡೆಯದಂತೆ ಬಿಡಿಸಲು

ಹೋಗಿರುತ್ತೇವೆ ಎಂದರೆ ಸರಿಯಲ್ಲ.

ಆ ಸಮಯದಲ್ಲಿ ಆರೋಪಿಯು ನನ್ನನ್ನು ಸಹಾ ಕೆಳಗೆ ತಳ್ಳಿ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕತ್ತಿಯು ಚಾಸಾ-1 ರವರ ಎಡ ಭುಜಕ್ಕೆ ಮತ್ತು ಎದೆಯ ಮದ್ಯ ಭಾಗಕ್ಕೆ ತಗುಲಿ ಗಾಯವಾಗಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ಹಲ್ಲೆಯಲ್ಲಿ ನನಗೆ ಮಂಡಿಯ ಮೇಲ್ಭಾಗಕ್ಕೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಚಾಸಾ-3 ರವರು ಜಗಳವನ್ನು ಬಿಡಿಸಿ ನನ್ನನ್ನು, ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೂಡಿಗೆರೆಯಿಂದ ಚಿಕ್ಕಮಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗಲಾಟೆಯ ಬಾಬ್ತು ಚಾಸಾ-1 ರವರು ಬಣಕಲ್ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮಗನಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ನ್ನು ಗುರುತಿಸಲು ನಿರಾಕರಿಸಿರುತ್ತಾರೆ. ಸಾಕ್ಷಿಯು ದಿ.29.11.2023 ರ ತಮ್ಮ ಹೇಳಿಕೆಯನ್ನು ಸಂಪೂರ್ಣವಾಗಿ ಅಲ್ಲಗಳೆದ ಕಾರಣ, ಸದರಿ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.</u>**
**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1123/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಕಿರಣ್ ರೈ | ಪ್ರಾಸಾ-3 |
| ತಂದೆಯ ಹೆಸರು | : ಬಿ.ಆರ್ ಕೃಷ್ಣ ಮೂರ್ತಿ | ಚಾಸಾ-3 |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೃಷಿ | ದಿನಾಂಕಃ 31.10.2025 |
| ವಾಸಸ್ಥಳ | : ಗೋಣೀಬೀಡು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯು ನನಗೆ ಪರಿಚಯಸ್ಥರಾಗಿರುತ್ತಾರೆ. ಚಾಸಾ-1 ನನ್ನ ಪತ್ನಿ. ಚಾಸಾ-2 ನನ್ನ ಮಾವ.

ದಿ.28.11.2023 ರಂದು ಮ.2.30 ರಿಂದ 3.00 ರ ಸಮಯದಲ್ಲಿ ಚಾಸಾ-2 ರವರ ಮನೆಯ ಬಳಿ ಚಾಸಾ-1 ರವರು ಚಾಸಾ-4 ರವರೊಟ್ಟಿಗೆ ಚಾಸಾ-2 ರವರ ಮನೆಯ ಫೋಟೋವನ್ನು ತೆಗೆಯಲು ಹೋದ ಸಮಯದಲ್ಲಿ ಆರೋಪಿಯು ತಡೆಯಾಜ್ಞೆ ಇರುವ ಬಗ್ಗೆ ತಿಳಿಸಿ ಮನೆಯ ಫೋಟೋ ತೆಗೆಯದಂತೆ ಚಾಸಾ-1 ರವರಿಗೆ ತಿಳಿಸಿರುತ್ತಾರೆ. ಸದರಿ ಜಗಳದಲ್ಲಿ ಆರೋಪಿಯು ಚಾಸಾ-1 ಮತ್ತು 2 ರವರಿಗೆ ಮನೆಯಲ್ಲಿ ಇದ್ದ ಕತ್ತಿಯನ್ನು ತಂದು ಹಲ್ಲೆಯನ್ನು ಮಾಡಿರುತ್ತಾರೆ. ಸದರಿ ಹಲ್ಲೆಯಲ್ಲಿ ಚಾಸಾ-1 ರವರಿಗೆ ಎಡಗೈ ಮತ್ತು ಎಡ ಭುಜಕ್ಕೆ, ಎದೆಯ ಮಧ್ಯಭಾಗ ಮತ್ತು ಅಂಗೈ ಗೆ ಗಾಯವಾಗಿರುತ್ತದೆ. ನಂತರ ಚಾಸಾ-2 ರವರಿಗೆ ಬಲಗಾಲಿನ ಮಂಡಿಯ ಮೇಲೆ ಗಾಯವಾಗಿರುತ್ತದೆ. ನಂತರ ಚಾಸಾ-1 ಮತ್ತು 2 ರವರನ್ನು ನಾನೇ ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ-1 ರವರನ್ನು ಚಿಕ್ಕಮಗಳೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿರುತ್ತದೆ. ಸದರಿ ಸಮಯದಲ್ಲಿ ಆರೋಪಿಯು ಅವಾಚ್ಯ ಶಬ್ದದಿಂದ ನಿಂದಿಸಿರುತ್ತಾರೆ ಮತ್ತು ಕಾಲಿನಿಂದ ಚಾಸಾ-1 ರವರಿಗೆ ಒದ್ದಿರುತ್ತಾರೆ. ಜಗಳವನ್ನು ಬಿಡಿಸಿ ನಾನೇ ಕತ್ತಿಯನ್ನು ತೋಟದ ಒಳಗೆ ಎಸೆದಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ನೋಡಿ ಆರೋಪಿಯು ಹಲ್ಲೆಗೆ ಉಪಯೋಗಿಸಿದ ಕತ್ತಿ ಎಂದು ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಸದರಿ ಹಲ್ಲೆಯಲ್ಲಿ ಆರೋಪಿಯು ಜೀವ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್ ವಕೀಲರಿಂದಃ**

ನಾನು ಪಲ್ಗುಣಿಯಲ್ಲಿರುವ ನನ್ನ ಸೈಟ್ ನ ಬಳಿಯಿಂದ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ಸ್ಥಳದಿಂದ ಘಟನಾ ಸ್ಥಳಕ್ಕೆ 100 ಮೀಟರ್ ಅಂತರವಿರುತ್ತದೆ. ಆ ದಿನ 1.30 ರಿಂದ 2.30 ರ ಸಮಯದವರೆಗು ಸೈಟ್ ನ ಬಳಿ ಇರುತ್ತೇನೆ. ಸದರಿ ಸೈಟ್ ಸ.ನಂ.133 ರಲ್ಲಿರುತ್ತದೆ. ನಾನು ಸದರಿ ಸೈಟ್ ನ್ನು ಪ್ರಕಾಶ್ ಎಂಬುವವರಿಂದ ಖರೀದಿಸಿರುತ್ತೇನೆ. ಚಾಸಾ-1 ನನ್ನ ಪತ್ನಿ ಎಂದರೆ ಸರಿ. ನಾವು ಪ್ರೀತಿಸಿ ಮದುವೆಯಾಗಿರುತ್ತೇವೆ. ನನ್ನ ಮತ್ತು ಚಾಸಾ-1 ರವರ ಮದುವೆಗೆ ಆರೋಪಿಯ ಒಪ್ಪಿಗೆ ಇಲ್ಲದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ಸೈಟ್ ನಿಂದ ಮ.2.20 ರ ಸಮಯದಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ-1, 2 ಮತ್ತು 4 ರವರು ಘಟನಾ ಸ್ಥಳದಲ್ಲಿ ಹಾಜರಿದ್ದರು. ಚಾಸಾ-1 ರವರು 2023 ರ ಸಮಯದಲ್ಲಿ ಬಣಕಲ್ ನಲ್ಲಿ ವಾಸಿಸುತ್ತಿದ್ದರು. ಆ ದಿನ ಚಾಸಾ-1 ರವರು ನನಗೆ ಯಾವುದೇ ದೂರವಾಣಿ ಕರೆ ಮಾಡಿರುವುದಿಲ್ಲ. ಘಟನೆ ನಡೆದ ಸಮಯದಲ್ಲಿ ನನ್ನ ಮತ್ತು ಚಾಸಾ-1 ರವರ ಮದುವೆಯಾಗಿರುವುದಿಲ್ಲ. ಆ ದಿನ ನಾನೊಬ್ಬನೇ ಘಟನಾ ಸ್ಥಳದ ಬಳಿ ಹೋಗಿರುತ್ತೇನೆ. ಆ ದಿನ ಗಲಾಟೆಯ ಶಬ್ದ ಕೇಳಿ ಘಟನಾ ಸ್ಥಳದ ಬಳಿ ಹೋಗಿರುತ್ತೇನೆ. ನಾನು ಹೋದ ಸಮಯದಲ್ಲಿ ಆರೋಪಿಯು ಮನೆಯ ಒಳಗಿದ್ದರು. ಸದರಿ ಹಲ್ಲೆಯಿಂದಾಗಿ ಆರೋಪಿಯು ಧರಿಸಿದ್ದ ಬಟ್ಟೆಯೂ ರಕ್ತಸಿಕ್ತವಾಗಿತ್ತು. ಸದರಿ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ.

ನಾನು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ ಆರೋಪಿಯು ಮನೆಯೊಳಗಿಂದ ಕತ್ತಿಯನ್ನು ತಂದಿದ್ದರು. ಎಂ.ಒ.1 ನ್ನು ಚಾಸಾ-2 ರವರು ತಮ್ಮ ಕುಲುಮೆ ಕೆಲಸದ ಮುಖಾಂತರ ತಯಾರಿಸಿರುತ್ತಾರೆ ಎಂದರೆ ಸರಿ. ನಾನು ಹೇಳಿದಂತೆ ಆರೋಪಿಯು ಚಾಸಾ-1 ಮತ್ತು 2 ರವರಿಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರು ಗಲಾಟೆಯನ್ನು ಬಿಡಿಸಲು ಪ್ರಯತ್ನಿಸಿರುತ್ತಾರೆ. ಸದರಿ ಹಲ್ಲೆಯಿಂದ ಚಾಸಾ-1 ರವರಿಗೆ ಎಡ ಭುಜ, ಎಡಗೈ ಮತ್ತು ಎದೆಯ ಮೇಲೆ ಗಾಯವಾಗಿರುತ್ತದೆ. ಸದರಿ ವಿಷಯವನ್ನು ನನ್ನ ಹೇಳಿಕಯಲ್ಲಿ ತಿಳಿಸಿರುವುದಿಲ್ಲ. ಆ ರೀತಿಯಾಗಿ ಆರೋಪಿಯು ಚಾಸಾ-1 ರವರಿಗೆ ಹಲ್ಲೆ ಮಾಡಿದ್ದಲ್ಲಿ ನನ್ನ ಹೇಳಿಕೆಯಲ್ಲಿ ತಿಳಿಸುತ್ತಿದ್ದೆ ಎಂದರೆ ಆರೋಪಿಯು ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 2.30 ರಿಂದ 2.45 ರ ಸಮಯದಲ್ಲಿ ಚಾಸಾ-2 ರವರ ಮೇಲೆ ಹಲ್ಲೆ ಮಾಡಲಾಗಿರುತ್ತದೆ. ಚಾಸಾ-2 ರವರು ಚಾಸಾ-1 ರವರೊಟ್ಟಿಗೆ ವಾಸವಿರುತ್ತಾರೆ. ಆರೋಪಿಯ ಕೈನಲ್ಲಿದ್ದ ಕತ್ತಿಯನ್ನು ಅಲ್ಲಿಯೇ ಬೇಲಿಯ ಪಕ್ಕದಲ್ಲಿ ಎಸೆದಿರುತ್ತೇನೆ. ಮ.2.45. ರ ಸಮಯಕ್ಕೆ ಪಲ್ಗುಣಿಯಿಂದ ಆಸ್ಪತ್ರೆಗೆ ಹೊರಟಿರುತ್ತೇನೆ. ಪಲ್ಗುಣಿಯಿಂ ಬಣಕಲ್ ಗೆ 4 ಕೀ.ಮೀ. ಅಂತರವಿರುತ್ತದೆ. ಪಲ್ಗುಣಿಯಿಂದ ಮೂಡಿಗೆರೆಗೆ ಎಷ್ಟು ಕೀ.ಮೀ. ಅಂತರವಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಪಲ್ಗುಣಿಯಿಂದ ಬಣಕಲ್, ಮೂಡಿಗೆರೆಗಿಂತ ಸಮೀಪದಲ್ಲಿರುತ್ತದೆ ಎಂದರೆ ಸರಿ.

ಬಣಕಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಸರಿಯಾದ ರೀತಿಯಲ್ಲಿ ನೀಡದೇ ಇರುವ ಕಾರಣ ಮೂಡಿಗೆರೆಗೆ ಕರೆದುಕೊಂಡು ಬಂದಿರುತ್ತೇನೆ. ಆ ದಿನ ಚಾಸಾ-1, 2 ಮತ್ತು ನಾನು ಆಸ್ಪತ್ರೆಗೆ

ಬಂದಿರುತ್ತೇವೆ. ಮೂಡಿಗೆರೆಯ ಆಸ್ಪತ್ರೆಗೆ ಮ.3.00 ಗಂಟೆಯಷ್ಟರಲ್ಲಿ ಬಂದಿರುತ್ತೇವೆ. ಮೂಡಿಗೆರೆಯಲ್ಲಿ ಚಾಸಾ-1 ಮತ್ತು 2 ರವರು ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ. ಸದರಿ ವೈದ್ಯರ ಹೆಸರು ನೆನಪಿರುವುದಿಲ್ಲ. ಸದರಿ ಸಮಯದಲ್ಲಿ ಆರೋಪಿಯಿಂದ ಹಲ್ಲೆಗೊಳಗಾದ ವಿಷಯವನ್ನು ಚಾಸಾ-1 ರವರೇ ವೈದ್ಯರಿಗೆ ತಿಳಿಸಿರುತ್ತಾರೆ. ನಂತರ ಅದೇ ದಿನ ಹೆಚ್ಚಿನ ಚಿಕಿತ್ಸೆಗಾಗಿ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಚಿಕ್ಕಮಗಳೂರಿನ ಆಸ್ಪತ್ರೆಗೆ ಯಾವ ಸಮಯಕ್ಕೆ ತಲುಪಿರುತ್ತೇನೆ ಎಂದು ನೆನಪಿರುವುದಿಲ್ಲ. ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನೆನಪಿರುವುದಿಲ್ಲ. ಆರೋಪಿಯು ಯಾವುದೇ ಹಲ್ಲೆ ಮಾಡಿರುವುದಿಲ್ಲ ಮತ್ತು ಚಾಸಾ-1 ಮತ್ತು 2 ರವರು ಯಾವುದೇ ಚಿಕಿತ್ಸೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ವಿಭಾಗವನ್ನು ಕೋರಿ ದಾವೆಯನ್ನು ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನಗೆ ಎಲ್ಲಾ ಮಾಹಿತಿ ತಿಳಿದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಲ್ಗುಣಿಯಲ್ಲಿ ಇರುವಂತಹ ಮನೆಯಲ್ಲಿ ಆರೋಪಿಯು ವಾಸಿಸುತ್ತಿರುತ್ತಾರೆ ಎಂದರೆ ಸರಿ. ಮನೆಯ ಬಳಿ ಇರುವ ತೋಟದ ಅಭಿವೃದ್ಧಿಯನ್ನು ಆರೋಪಿಯು ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಆಸ್ತಿಯಲ್ಲಿ ವಿಭಾಗವನ್ನು ಕೊಡಲಿ ಎಂಬ ಕಾರಣದಿಂದ ಪ್ರಸ್ತುತ ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ, ಮುದ್ದೆಮಾಲಿಗೂ, ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.